

ಟೀಚರ್ ಕಷ್ಟ-ಸುಖ

ಮಾನಸಿಕ ಬಳಲಿಕೆ ಶುರು ಆಗುತ್ತದೆ. ಇವೆಲ್ಲದರ ನಡುವೆ ನಮ್ಮ ಆರೋಗ್ಯದ ಬಗ್ಗೆ ಗಮನಹರಿಸಲು ಆಗುವುದೇ ಇಲ್ಲ. ಗಟ್ಟಿತನ, ದೈಹಿಕ ಸದೃಢತೆ ಕಾಪಾಡಿಕೊಂಡಾಗ ಆತ್ಮವಿಶ್ವಾಸದಿಂದ ಎಲ್ಲವನ್ನೂ ಎದುರಿಸಬಹುದು. ಆದರೆ, ಅದಕ್ಕೆ ಸಮಯವಾದರೂ ಬೇಕಲ್ಲವೇ?' ಎಂಬ ಶೋಭಾ ಅವರ ಪ್ರಶ್ನೆಗೆ ಉತ್ತರಿಸುವುದು ಸುಲಭವಲ್ಲ.

'ಎಷ್ಟೋ ಬಾರಿ ಮನೆಗೂ ಶಾಲಾ ಕೆಲಸಗಳನ್ನು ವರ್ಗಾಯಿಸಿಕೊಳ್ಳುತ್ತೇವೆ. ಮನೆಯಲ್ಲಿ ಚಿಕ್ಕ ಮಕ್ಕಳಿರುವುದರಿಂದ ಇವೆಲ್ಲದರ ನಿರ್ವಹಣೆ ಒಮ್ಮೊಮ್ಮೆ ಹೊರೆ ಎನಿಸುತ್ತದೆ. ಹಾಗಾದಾಗ ನಮ್ಮ ಕಾರ್ಯಕ್ಷಮತೆ ಕ್ಷೀಣಿಸುತ್ತಿದೆ' ಎನ್ನುವ ದೊಡ್ಮನಿ ಶಶಿಕಲಾ ಅವರ ಮಾತು ಇಂದಿನ ಶಿಕ್ಷಣದ ಗುಣಮಟ್ಟದ ಹಿಂದಿನ ಕಾರಣದ ಕುರಿತೂ ಬೊಟ್ಟು ಮಾಡಿ ತೋರಿಸುವಂತಿದೆ.

'ಇಷ್ಟೆಲ್ಲ ಸವಾಲುಗಳನ್ನು ನಿಭಾಯಿಸಿಯೂ ಶಿಕ್ಷಕಿಯರು ಹೆಚ್ಚು ಪ್ರಾಶಸ್ತ್ಯ ನೀಡುವುದು ಶಾಲಾಮಕ್ಕಳಿಗೇನೆ. ಆ ಮಕ್ಕಳ ಅಭಿವೃದ್ಧಿಗಾಗಿ ವಿಶೇಷ ತರಗತಿ ತೆಗೆದುಕೊಂಡು ಒತ್ತಡದ ನಡುವೆಯೂ ಫಲಿತಾಂಶ ಚೆನ್ನಾಗಿ ಬರಬೇಕೆಂದು ಶ್ರಮಿಸುತ್ತೇವೆ. ಫಲಿತಾಂಶ ಚೆನ್ನಾಗಿ ಬಂದರೆ ಅದಕ್ಕೆ ಕಾರಣ ಇಲಾಖೆ ತೆಗೆದುಕೊಂಡ ಸುಧಾರಣಾ ಕ್ರಮ ಎನ್ನುತ್ತಾರೆ. ಅದೇ, ಫಲಿತಾಂಶ ಕಳಪೆ ಆಗಿದ್ದರೆ ವಿಷಯದ ಶಿಕ್ಷಕಿಯರನ್ನು ಗುರಿಮಾಡುತ್ತಾರೆ' ಎಂದು ನಗುವ ಶೋಭಾ ಮಾತಿನಲ್ಲಿ ವ್ಯವಸ್ಥೆಯ ವಿಪರ್ಯಾಸವೂ ಎದ್ದುಕಾಣುತ್ತದೆ.

## ಉದ್ಯೋಗವಲಯದಲ್ಲೂ ಕಾಟ

ಶಿಕ್ಷಕ ವರ್ಗದಲ್ಲೇ ಶಿಕ್ಷಕಿಯರನ್ನು ಕೀಳಾಗಿ ಕಾಣುವ, ಅವರ ಜವಾಬ್ದಾರಿ, ಕೆಲಸಗಳ ಕುರಿತು ವ್ಯಂಗ್ಯವಾಡುವ ಮನೋಭಾವ ಇರುವವರಿಗೇನೂ ಕೊರತೆ ಇಲ್ಲ. ಮೇಲಧಿಕಾರಿಗಳಿಂದ ಪ್ರಶಂಸೆಗೆ ಒಳಗಾದಾಗ, ಶಿಕ್ಷಕಿಯ ಬುದ್ಧಿಮಟ್ಟ ನಿರ್ಧರಿಸಿ ಮಹತ್ವದ ಜವಾಬ್ದಾರಿ ವಹಿಸಿದಾಗ ಸಹೋದ್ಯೋಗಿಗಳು ನೋಡುವ ನೋಟವೇ ಬದಲಾಗಿಬಿಡುತ್ತದೆ. 'ಇದರಲ್ಲಿ ಏನೋ ಒಳಮರ್ಮ ಇದೆ' ಎಂದು ಅನುಮಾನದಿಂದಲೇ ಶಿಕ್ಷಕಿಯನ್ನು ನೋಡುತ್ತಾರೆ. ಮೇಲಧಿಕಾರಿಗಳಿಂದ ಅಥವಾ ಸಹೋದ್ಯೋಗಿಗಳಿಂದ ಮಾನಸಿಕ, ದೈಹಿಕ ಹಿಂಸೆಗೆ ಒಳಗಾದ ಉದಾಹರಣೆಗಳೂ ಸಾಕಷ್ಟಿವೆ.

'ನಾಯಕತ್ವ ಎನ್ನುವುದು ಪುರುಷರಿಗೆ ಮಾತ್ರ ಎಂದು ಕೆಲವರು ವರ್ತಿಸುತ್ತಾರೆ. ಶಿಕ್ಷಕರ ಚುನಾವಣೆ ಸಂದರ್ಭದಲ್ಲಿ ಬಹುಸಂಖ್ಯೆಯಲ್ಲಿ ಶಿಕ್ಷಕಿಯರಿದ್ದರೂ ಅವರನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಎಲ್ಲ ಸ್ಥಾನಗಳ ಆಯ್ಕೆ ಆದಮೇಲೆ ಚೂರಾದರೂ ಮಹಿಳೆಯರಿಗೆ ಪ್ರಾಶಸ್ತ್ಯ ಕೊಡಬೇಕಲ್ಲ ಎನ್ನುವ ಕಾರಣಕ್ಕೆ ಗೌರವ ಕಾರ್ಯದರ್ಶಿಯೋ ಗೌರವಾಧ್ಯಕ್ಷರಾಗಿಯೋ ನಾಮಕಾವಸ್ತೆಗೆ ನೇಮಿಸಿಕೊಳ್ಳುತ್ತಾರೆ' ಎಂದು ಶಿಕ್ಷಕರ ಸಂಘಟನೆಗಳಲ್ಲಿಯೂ ಇರುವ ತಾರತಮ್ಯದ ಕುರಿತು ಧ್ವನಿ ಎತ್ತುತ್ತಾರೆ ಲೇಖಕಿಯಾಗಿಯೂ ಗುರ್ತಿಸಿಕೊಂಡಿರುವ ಹಾಸನದ ಅರಸೀಕೆರೆಯ ಸೈದರಹಳ್ಳಿ ಪ್ರೌಢಶಾಲೆಯ ಶಿಕ್ಷಕಿ ಮಮತಾ ಅರಸೀಕೆರೆ.

ಹೆಣ್ಣು ಎನ್ನುವ ಕಾರಣ ಒಡ್ಡಿ ಯಾವ ಜವಾಬ್ದಾರಿಯಿಂದಲೂ ನುಣುಚಿಕೊಳ್ಳುವಂತಿಲ್ಲ. 'ನಮ್ಮಷ್ಟೇ ವೇತನ ಪಡೆಯುತ್ತೀರಿ. ಇಂತಹ ಸಂದರ್ಭಗಳು ಬಂದಾಗ ತಪ್ಪಿಸಿಕೊಳ್ಳಲು ನೋಡುತ್ತೀರ' ಎನ್ನುವ ಚುಚ್ಚುಮಾತು ಪುರುಷವರ್ಗದಿಂದ ಕೇಳಿಸಿಕೊಳ್ಳಬೇಕು. ಚುನಾವಣಾ ಕಾರ್ಯದ ಸಮಯದಲ್ಲಿ ಮಹಿಳೆಯರಿಗೆ ಅಗತ್ಯ ಸೌಲಭ್ಯಗಳಿಲ್ಲದಿದ್ದರೂ ಆಕೆ ಕರ್ತವ್ಯ ನಿರ್ವಹಿಸಲೇಬೇಕು. ಅದರಲ್ಲೂ

## ಎಟಿಎಂ ಪತಿ ಬಳಿಯಲ್ಲಿ!

ಹೆಣ್ಣಿನ ಸಂಬಳವನ್ನೇ ನೆಚ್ಚಿಕೊಂಡಿರುವ ಕುಟುಂಬಗಳು ನಮ್ಮ 'ಪುರುಷ ಪ್ರಧಾನ ಸಮಾಜ'ದಲ್ಲಿ ಅನೇಕ ಇವೆ. ತಿಂಗಳ ಆರಂಭ ಬಂತೆಂದರೆ ಹೆಣ್ಣಿನತ್ತ ಸಂಬಳಕ್ಕಾಗಿ ಕೈಚಾಚಿ ಕೂರುವವರ ಸಂಖ್ಯೆ ಕಡಿಮೆಯೇನಿಲ್ಲ. ಈ ಪರಿಸ್ಥಿತಿ ಶಿಕ್ಷಕಿಗೂ ತಪ್ಪಿಲ್ಲ.

'ಸಹೋದ್ಯೋಗಿಯೊಬ್ಬರ ಎಟಿಎಂ ಯಾವಾಗಲೂ ಆಕೆಯ ಪತಿಯ ಬಳಿ ಇರುತ್ತದೆ. ಸಂಬಳ ಬಂದಾಗ ತಿಂಗಳ ಬಸ್ ಚಾರ್ಜ್‌ಗೆಂದು ಇಂತಿಷ್ಟು ಹಣ ಆಕೆಯ ಕೈಗಿಡುತ್ತಾರೆ ಅಷ್ಟೆ. ಸಿಬ್ಬಂದಿ ಜೊತೆ ಸಂಜೆ ವೇಳೆ ಟೀಗೋ ಕಾಫಿಗೋ ಹೋದರೆ ಆಕೆ ಮಾತ್ರ ಬರುವುದಿಲ್ಲ. 'ಬಸ್ ಚಾರ್ಜ್‌ಗೆ ಮಾತ್ರ ನನ್ನ ಬಳಿ ಹಣವಿದೆ. ಇನ್ನು ಹೊರಗೆ ಹೋದರೆ ಖರ್ಚು ಮಾಡಲು ಎಲ್ಲಿಂದ ತರಲಿ' ಎನ್ನುವ ಹಿಂಜರಿಕೆ ಆಕೆಯದು. ತಾನು ದುಡಿದ ಹಣವನ್ನು ಸ್ವತಂತ್ರವಾಗಿ ಬಳಸುವ ಹಕ್ಕೂ ಆಕೆಗಿಲ್ಲ. ಇದು ನಮ್ಮ ಸಮಾಜದ ದುರಂತ' ಎಂದು ತನ್ನ ಸಹೋದ್ಯೋಗಿಯೊಬ್ಬರ 'ಆರ್ಥಿಕ ಸ್ವಾತಂತ್ರ'ದ ಬಗ್ಗೆ ವಿವರಿಸುವರು ಶಿಕ್ಷಕಿ, ಲೇಖಕಿ ಮಮತಾ ಅರಸೀಕೆರೆ.